# ಹೊಳೆನರಸೀಪುರದ ಜೆ.ಎಂ.ಎಫ್.ಸಿ., ರವರ ನ್ಯಾಯಾಲಯದಲ್ಲಿ.

## ಸಿ.ಸಿ.ನಂಃ 1014/15

| | | | |
|---|---|---|---|
| **ಸಾಕ್ಷಿಯ ಹೆಸರು** | : ದೇವೆಗೌಡ | **ಸಿ.ಡಬ್ಲ್ಯೂ** | ಃ 2 |
| **ತಂದೆ ಹೆಸರು** | : ಈರೇಗೌಡ | **ಪಿ.ಡಬ್ಲ್ಯೂ** | ಃ 2 |
| **ವಯಸ್ಸು** | ಃ 63 ವರ್ಷ, | **ಪ್ರಮಾಣೀಕರಿಸಿದ ದಿಃ** | 24-07-2019. |
| **ವೃತ್ತಿ** | ಃ ನಿವೃತ್ತ ಡಿ ಗ್ರೂಪ ನೌಕರ | | |
| **ವಾಸ** | ಃ ಕೋಡಿಹಳ್ಳಿ | | |

**ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ ಯವರಿಂದ**

ಚಾ.ಸಾ 1 ಮತ್ತು 3 ರಿಂದ 9 ರವರು ನನಗೆ ಗೊತ್ತು. ನಾನು ಜುಲೈ 2015 ರವರೆಗೆ ಹೊನಪುರ ಸರ್ಕಾರಿ ಆಸ್ಪತ್ರೆಯಲ್ಲಿ ಡಿ ಗ್ರೂಪ ನೌಕರವಾಗಿ ಕೆಲಸ ಮಾಡಿ ನಿವೃತ್ತಿ ಹೊಂದಿದ್ದೇನೆ. ಜನೇವರಿ 2015 ರಲ್ಲಿ ರಾತ್ರಿ 10-30 ರಿಂದ 11 ಗಂಟೆ ಸಮಯದಲ್ಲಿ ನಾನು, ಚಾ.ಸಾ 3 ಮತ್ತು ಇತರ ಸಿಬ್ಬಂದಿಗಳು ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದಾಗ ಒಬ್ಬ ವ್ಯಕ್ತಿ ವಿಷ ಕುಡಿದು ಚಿಕಿತ್ಸೆಗೆ ಬಂದಿದ್ದರು. ಆಗ ಆರೋಪಿ ಮದ್ಯಪಾನ ಮಾಡಿ ಅಲ್ಲಿಗೆ ಬಂದು ತಮ್ಮ ಕೈಯಿಂದ ನನ್ನ ಬಲಕೆನ್ನೆಗೆ ಹೊಡೆದರು. ಆರೋಪಿಯ ಕೃತ್ಯದಿಂದ ಕರ್ತವ್ಯಕ್ಕೆ ಅಡ್ಡಿ ಉಂಟಾಗಿದೆ. ಈ ಬಗ್ಗೆ ಚಾ.ಸಾ 1 ಮತ್ತು 3 ರವರು ದೂರು ನೀಡಿದ್ದಾರೆ. ಪೋಲಿಸರು ನನ್ನ ಹೇಳಿಕೆ ಪಡದುಕೊಂಡಿದ್ದಾರೆ. ಆರೋಪಿಯನ್ನು ನಾನು ಈಗ ಗುರುತಿಸಬಲ್ಲೆ. ಆರೋಪಿ ಪರ ವಕೀಲರಾದ ಶ್ರೀ ಕೆ.ಎನ್.ವಿರವರ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀಸವಾಲು ಶ್ರೀ ಕೆ.ಎನ್.ವಿ ವಕೀಲರಿಂದ**

ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಆರೋಪಿ ಹಲ್ಲೆ ಮಾಡಿದ್ದರಿಂದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡಿಲ್ಲ. ಆ ಬಗ್ಗೆ ಚುಚ್ಚು ಮದ್ದು ಮಾಡಿಸಿಕೊಂಡಿದ್ದೇನೆ. ನನಗೆ ಚುಚ್ಚು ಮದು ನೀಡಿದ ವೈದ್ಯರ ಹೆಸರು ಈಗ ನನಗೆ ನೆನಪಿಲ್ಲ. ಆರೋಪಿ ಹೊಡೆದಾಗ ನಾನು ಕೆಳಗೆ ಬಿದ್ದಿದ್ದೇನು. ಆರೋಪಿ ಒಬ್ಬರು ಮಾತ್ರ ನನಗೆ ಹೊಡೆದಿದ್ದರು. ನಾನು ಕೆಳಗೆ ಬಿದ್ದಾಗ ನನ್ನನ್ನು ವೈದ್ಯರು ಸುಧಾರಿಸಿದ್ದಾರೆ. ನಾನು ಕೆಳಗೆ ಬಿದ್ದ ನಂತರ 2 ಗಂಟೆಗಳ ವರೆಗೆ ನನಗೆ ಪ್ರಜ್ಞೆ ಇರಲಿಲ್ಲ. ಆಸ್ಪತ್ರೆಯ ಬಾಗಿಲಲ್ಲಿ ಆರೋಪಿ ನನಗೆ ಹೊಡೆದಿದ್ದರು. ಆಗ ಚಾ.ಸಾ 3 ಮತ್ತು ಇತರ ಸಿಬ್ಬಂದಿಗಳು ವಾರ್ಡನಲ್ಲಿ ರೋಗಿಗೆ ಚಿಕಿತ್ಸೆ ನೀಡುತ್ತಿದ್ದರು. ನಾನು ರೋಗಿಯನ್ನು ವಾರ್ಡ ಒಳಗೆ ಬಿಟ್ಟು ಹೊರಗೆ ಬರುತ್ತಿದ್ದೇನು. ನಾನು ಆರೋಪಿ ಹಲ್ಲೆ ಮಾಡಿದ್ದ ಬಗ್ಗೆ ನನಗೆ ಪ್ರಜ್ಞೆ ಬಂದ ನಂತರ ವೈದ್ಯರಿಗೆ ತಿಳಿಸಿದ್ದೇನೆ. ಅದಕ್ಕಿಂತ

ಮೊದಲು ಚಾ.ಸಾ 3 ರವರಿಗೆ ಗಲಾಟೆಯ ವಿಷಯ ಗೊತ್ತಿರಲಿಲ್ಲ ಎಂದರೆ ಸಾಕ್ಷಿ ಅವರಿಗೆ ಗೊತ್ತಿತ್ತು, ಗಲಾಟೆ ಅವರೆ ಬಿಡಿಸಿದ್ದರು ಎಂದು ನುಡಿಯುತ್ತಾರೆ. ನಾನು ಮಧ್ಯಪಾನ ಮಾಡುವುದಿಲ್ಲ. ವಿಷ ಸೇವನೆಯ ವಾಸನೆಯನ್ನು ನಾನು ಆರೋಪಿಯ ಮಧ್ಯಪಾನದ ವಾಸನೆ ಎಂದು ತಪ್ಪು ತಿಳಿದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಹೆಸರು ನನಗೆ ಘಟನೆಯ ಮೊದಲು ಗೊತ್ತಿತ್ತು. ಆತನ ಊರು, ತಂದೆಯ ಹೆಸರು ಮತ್ತು ಜಾತಿಯ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಮಂಜ ಎಂಬ ವ್ಯಕ್ತಿ ಮತ್ತು ಈ ಪ್ರರಕಣದ ಆರೋಪಿ ಬೇರೆ ಬೇರೆ ಎಂದರೆ ಸರಿಯಲ್ಲ.

ಇನ್ನೊಬ್ಬ ಡಿ ಗ್ರೂಪ ನೌಕರರಾದ ಪುಟ್ಟರಾಜ ಆ ದಿನ ಕೆಲಸದಲ್ಲಿ ಇರಲಿಲ್ಲ. ಚಿಕಿತ್ಸೆಗೆ ಬಂದಿದ್ದ ರೋಗಿಗೆ ನಂತರ ಏನಾಗಿದೆ ನನಗೆ ಗೊತ್ತಿಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಒ.

ಜೆ.ಎಂ.ಎಫ್.ಸಿ, ಹೊಳೆನರಸೀಪುರ.